

ಪ್ರದೇಶಗಳ ಮನೆಗಳಿಗೆ ಹೋಗುತ್ತಿದ್ದ ಉಷಾ ಪ್ರಸಾರ ಮುಗಿಸುತ್ತಿದ್ದರು. ಸರ್ಕಾರಿ ರೇಡಿಯೋಕ್ಕೆ ಸಂಬಂಧಿಸಿದವರು ಹಾಗೂ ಇತರ ರೇಡಿಯೋಗಳವರು 'ಕಾಂಗ್ರೆಸ್ ರೇಡಿಯೋ'ದ ಸಿಗ್ನಲ್‌ಗಳನ್ನು ಜಾಮ್ ಮಾಡಲೆತ್ನಿಸುತ್ತಿದ್ದರು; ಈ ಸವಾಲನ್ನೂ ಉಷಾ ಮೆಹ್ತಾರ ಪ್ರಸಾರ ಎದುರಿಸಬೇಕಾಯಿತು.

ಲೋಹಿಯಾ ಮುಂಬೈ, ಕಲ್ಕತ್ತಾ ಎರಡೂ ಕಡೆ ಚಳುವಳಿಯ ಜೊತೆಗೇ ಕಾಂಗ್ರೆಸ್ ರೇಡಿಯೋದ ಕೆಲಸ ಮುಂದುವರಿಸಿದ್ದರು. ಒಮ್ಮೆ ಅವರ ಮಾತುಗಳ ರೆಕಾರ್ಡಿಂಗ್ ನಡೆಯುತ್ತಿದ್ದಾಗಲೇ ಪೊಲೀಸರು ಹುಡುಕಿಕೊಂಡು ಬಂದರು. ಲೋಹಿಯಾ ಹಾಗೂ ಗೆಳೆಯರು ತಪ್ಪಿಸಿಕೊಂಡರು; ನಂತರ ಇಬ್ಬರು ಗೆಳೆಯರು ಸಿಕ್ಕಿಬಿದ್ದರು. ಆದರೆ ಲೋಹಿಯಾ ಬಗ್ಗೆ ಗೆಳೆಯರಿಗೆ ಎಷ್ಟು ಪ್ರೀತಿ, ವಿಶ್ವಾಸ ಇತ್ತೆಂದರೆ, ಏನು ಮಾಡಿದರೂ ಲೋಹಿಯಾ ಬಗ್ಗೆ ಬಾಯಿ ಬಿಡಲಿಲ್ಲ; ಗೆಳೆಯರ ಈ ನಿಷ್ಠೆಗೆ ಸ್ವಾತಂತ್ರ್ಯ ಹೋರಾಟ ಕುರಿತ ಲೋಹಿಯಾ ಬದ್ಧತೆ ಹಾಗೂ ಗೆಳೆಯರ ಕಷ್ಟಗಳನ್ನು ಅರ್ಥ ಮಾಡಿಕೊಂಡು ಅವರು ಸ್ಪಂದಿಸುತ್ತಿದ್ದ ರೀತಿ ಕೂಡ ಕಾರಣವಾಗಿತ್ತು.

ಒಮ್ಮೆ ಕಲ್ಕತ್ತಾದಲ್ಲಿ ಲೋಹಿಯಾ ಇದ್ದ ಮನೆಯ ಸುತ್ತಮುತ್ತಲ ಜನರು ಈ ವಿಚಿತ್ರ ವ್ಯಕ್ತಿ ಯಾರು, ಏನು, ಎತ್ತ ಎಂದು ವಿಚಾರಿಸತೊಡಗಿದರು. ಆಗ ಮನೆಯ ಒಡತಿ, 'ಈತ ನಮ್ಮತ್ತೆಯ ತಮ್ಮ. ಪಾಪ! ಜೂಜಿನಲ್ಲಿ ಇದ್ದಬದ್ದ ದುಡ್ಡೆಲ್ಲ ಕಳಕೊಂಡು ಮುಖ ಮರೆಸಿಕೊಂಡು ಓಡಾಡ್ತಿದಾನೆ; ಮನೇಲೇ ಇರ್ತಾನೆ' ಎನ್ನುತ್ತಿದ್ದರು. ಮನೆಯವರೆಲ್ಲ ಲೋಹಿಯಾರನ್ನು 'ಬಾಂಠಿಯಾಜಿ' ಎನ್ನುತ್ತಿದ್ದರು. ಲೋಹಿಯಾ ಹೊರಗೆ ಹೊರಟಾಗ ಮುಖಕ್ಕೆ ಕಪ್ಪು ಮಚ್ಚೆ ಇಟ್ಟುಕೊಳ್ಳುತ್ತಿದ್ದರು.

ಲೋಹಿಯಾ ಮುಂದೊಮ್ಮೆ ಸಂದರ್ಶನವೊಂದರಲ್ಲಿ ಈ ರೇಡಿಯೋ ಸಾಹಸದ ಕೆಲವು ವಿವರಗಳನ್ನು ಕೊಟ್ಟರು:

'ಬಾಂಬೆಯಲ್ಲಿ ನಾವೆಲ್ಲ ಸೇರಿ ಭೂಗತ ಹೋರಾಟ ಮುಂದುವರಿಸಬೇಕೆಂದು ತೀರ್ಮಾನಿಸಿ ಡೆಲ್ಲಿ, ಕಲ್ಕತ್ತಾ, ನೇಪಾಳ ಹೀಗೆ ಹಲವೆಡೆ ಚದುರಿ ಹೋದೆವು. ರೇಡಿಯೋ ಕೂಡ ನಡೆಸಿದೆವು. ಒಂದು ಘಟ್ಟದಲ್ಲಿ ಇಡೀ ದೇಶದುದ್ದಕ್ಕೂ ರೇಡಿಯೋ ಪ್ರಸಾರ ಮಾಡಲು ಇಪ್ಪತ್ತು ಟ್ರಾನ್ಸ್‌ಮಿಟರ್‌ಗಳನ್ನು ಹೊಂದಿಸಿಕೊಳ್ಳುವ ಯೋಜನೆ ಹಾಕಿಕೊಂಡೆವು; ಹದಿನೈದೋ, ಹದಿನೇಳೋ ಟ್ರಾನ್ಸ್‌ಮಿಟರ್‌ಗಳನ್ನು ಸಿದ್ಧ ಮಾಡಿದೆವು. ಇದನ್ನೆಲ್ಲ ನೋಡಿಕೊಳ್ಳುತ್ತಿದ್ದವಳು ಉಷಾ ಮೆಹ್ತಾ ಎಂಬ ಹುಡುಗಿ. ಭಾಳಾ ಧೈರ್ಯಶಾಲಿ ಹುಡುಗಿ. ಪೊಲೀಸರು ಬೆನ್ನು ಹತ್ತಿದ್ದಾರೆಂದು ಗೊತ್ತಾದಾಗ ಪ್ರಸಾರದ ಸಲಕರಣೆಗಳು ಪೊಲೀಸರ ಕೈಗೆ ಸಿಕ್ಕುವುದಕ್ಕಿಂತ ಅವನ್ನು ನಾಶ ಮಾಡುವುದು ಒಳ್ಳೆಯದು ಎಂಬುದು ಅವಳ ವಾದ. ಹೀಗೇ ಉಷಾ ಮೂರು ತಿಂಗಳು ರೇಡಿಯೋ ನಡೆಸಿದಳು.'

ಪೊಲೀಸರು ಉಷಾ ಬೆನ್ನ ಹಿಂದೆಯೇ ಇದ್ದರು. ಉಷಾ ಪೊಲೀಸರಿಗೆ ಕೈ ಕೊಡುತ್ತಲೇ ಇದ್ದರು. ಪ್ರಸಾರ ಶುರುವಾಗಿ ಮೂರು ತಿಂಗಳ ನಂತರ ಒಂದು ರಾತ್ರಿ ಪೊಲೀಸರು ಬಾಗಿಲು ಒಡೆದು ಒಳ ಬರುವ ಹೊತ್ತಿಗೆ ಉಷಾ ಅವತ್ತಿನ ಪ್ರಸಾರ ಮುಗಿಸಿದ್ದರು.

ರೇಡಿಯೋ ತಂಡದಲ್ಲಿದ್ದ ತಂತ್ರಜ್ಞನೊಬ್ಬ ದ್ರೋಹ ಬಗೆದಿದ್ದ; ಪೊಲೀಸರಿಗೆ ಸುದ್ದಿ ಕೊಟ್ಟಿದ್ದ. ಉಷಾ ಬಂಧನವಾಯಿತು.

27 ಆಗಸ್ಟ್ 1942ರಿಂದ 14 ನವಂಬರ್ 1942ರವರೆಗೆ ಸುಮಾರು 80 ದಿನಗಳ ಕಾಲ ಕಾಂಗ್ರೆಸ್ ರೇಡಿಯೋ ಕೆಲಸ ಮಾಡಿತ್ತು.

ಬಂಧನದಲ್ಲಿದ್ದ ಉಷಾ ಮೆಹ್ತಾಗೆ ಪೊಲೀಸರು ಬಗೆ ಬಗೆಯ ಆಮಿಷ ಒಡ್ಡಿದರು. 'ಮುಂದೆ ಓದಲು ಫಾರಿನ್ನಿಗೆ ಕಳಿಸುತ್ತೇವೆ; ಈ ಯೋಜನೆಯ ಹಿಂದೆ ಇದ್ದವರು ಯಾರು ಹೇಳು' ಎಂದರು. ಏನು ಮಾಡಿದರೂ ರೇಡಿಯೋ ಹಿಂದೆ ಇದ್ದವರ ವಿವರಗಳನ್ನು ಉಷಾ ಬಾಯಿಬಿಡಲಿಲ್ಲ. ಉಷಾಗೆ ಜೈಲು ಶಿಕ್ಷೆಯಾಯಿತು.

ಮುಂದೊಮ್ಮೆ ಲೋಹಿಯಾ ಬ್ರಿಟಿಷ್ ಲೇಬರ್ ಪಕ್ಷದ ನಾಯಕ ಹೆರಾಲ್ಡ್ ಲಾಸ್ಕಿಗೆ ಬರೆದ ಪತ್ರದಲ್ಲಿ ಉಷಾ ಮೆಹ್ತಾರ ವಿಚಾರಣೆಯ ವಿಳಂಬವನ್ನು ಖಂಡಿಸಿದರು; 'ಈಕೆ ರಷ್ಯನ್ ಅಥವಾ ಸ್ಪ್ಯಾನಿಷ್ ಆಗಿದ್ದರೆ ನಿಮ್ಮ ದೇಶಬಾಂಧವರು ಈಕೆಯೊಬ್ಬ ದೊಡ್ಡ ನಾಯಕಿಯೆಂದು ರಮ್ಯೀಕರಿಸಿ ಹಾಡಿ ಹೊಗಳಿರುತ್ತಿದ್ದರು. ವಿಚಾರಣೆಯ ವಿಳಂಬದಿಂದಾಗಿ ಉಷಾ ಮೆಹ್ತಾ ಇನ್ನೂ ಸೆರೆಮನೆಯಲ್ಲಿರುವಂತಾಗಿದೆ' ಎಂದು ಸರ್ಕಾರದ ಘೋರ ತಪ್ಪನ್ನು ಲಾಸ್ಕಿಯವರ ಗಮನಕ್ಕೆ ತಂದರು.

1946ರಲ್ಲಿ ಸೆರೆಮನೆಯಿಂದ ಬಿಡುಗಡೆಯಾದ ಉಷಾ, ಸ್ವತಂತ್ರ ಭಾರತದಲ್ಲಿ ಮುಂಬೈ